ಇನಾಂದಾರ್‌ರವರಿಗೆ ಹಾಗೂ ಮಾನ್ಯ ಕೃಷ್ಣಪ್ಪನವರಿಗೆ ಮಾನ್ಯ ಮುಖ್ಯಮಂತ್ರಿಗಳು ಆಥರೈಸ್ ಮಾಡಿಲ್ಲ. ಇವರು ಆಥರೈಸ್ ಮಾಡಿರುವುದು ಡಿ.ಬಿ.ಚಂದ್ರೇಗೌಡರವರಿಗೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಡಿ.ಬಿ.ಚಂದ್ರೇಗೌಡವರಿಗೆ ಆಥರೈಸ್ ಮಾಡಿರುವುದರಿಂದ ಅವರು ಉತ್ತರಿಸುತ್ತಾರೆ, ಆದರೆ ಅವರು ಊಟ ಮಾಡಿಕೊಂಡು ಬರುತ್ತೇನೆಂದು ಹೇಳಿಯೇ ಹೋಗಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅಧ್ಯಕ್ಷರೆ, ತಾವು ದಯಮಾಡಿ ಬೇಸರಿಸಿಕೊಳ್ಳಬೇಡಿ, ಏಕೆಂದರೆ, ನಿಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ. ನಾವು ಜವಾಬ್ದಾರಿಯಿಂದ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡತಕ್ಕಂಥವರು, ಈ ಸಭೆ ಸರಿಹೋಗುವ ತನಕ ನಾವು ಸಭೆ ನಡೆಸುವುದಕ್ಕೆ ತಯಾರಿಲ್ಲ. ಸರ್ಕಾರದ ಅಲಕ್ಷ್ಯ, ನಿರ್ಲಕ್ಷ್ಯ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ. ಇಡೀ ರಾಜ್ಯದ ಸಮಸ್ಯೆಯನ್ನು ಚರ್ಚೆ ಮಾಡಬೇಕು ಎನ್ನುವುದು ಹಾಗೂ ಈ ಚರ್ಚೆಯನ್ನು ಕೇಳುವುದಕ್ಕೂ ಕೂಡ ಸರ್ಕಾರ ಸಿದ್ದವಿಲ್ಲ. ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ವೈ.ಕೆ.ರಾಮಯ್ಯನವರು, ಬಹಳ ಹಿರಿಯರು, ಅನುಭವ ಇರತಕ್ಕಂಥವರು, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಇವರ ಮಾತುಗಳನ್ನು ಸರ್ಕಾರಕ್ಕೆ ಕೇಳುವ ಸೌಜನ್ಯ ಇಲ್ಲದ ಮೇಲೆ ನಾವು ಇಲ್ಲಿ ಏಕೆ ಕುಳಿತುಕೊಳ್ಳಬೇಕು? ಅವರೇ ಕೋರಂ ಇಟ್ಟುಕೊಂಡು ಈ ಸಭೆಯನ್ನು ನಡೆಸಲಿ.

(ಈ ಹಂತದಲ್ಲಿ ಸನ್ಮಾನ್ಯ ಸದಸ್ಯರೊಡನೆ ಇತರೇ ಜನತಾ ದಳದ (ಯು) ಸದಸ್ಯರೂ ಕೂಡ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೇ, ಈಗಾಗಲೇ ಮಾನ್ಯ ಕೃಷ್ಣಪ್ಪನವರು ಹೇಳಿರುವುದರಿಂದ, ಇವತ್ತು ಒಂದು ದಿವಸಕ್ಕೆ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ, ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳೋಣ.

ಶ್ರೀ ಸಿ.ಭೈರೇಗೌಡ: ನಾನು ಇಲ್ಲಿ ಎದ್ದು ನಿಂತು ಪ್ರಶ್ನೆ ಕೇಳಬೇಕಾದರೆ ಎದುರುಗಡೆ ನೋಡಿದರೆ ನಮಗೆ ಮಾತನಾಡುವುದಕ್ಕೆ ಸ್ಫೂರ್ತಿ ಬರುತ್ತದೆ. ಖಾಲಿ ಕುರ್ಚಿ ನೋಡಿದರೆ ಏನು ಸ್ಫೂರ್ತಿ ಬರುತ್ತದೆ? ಗಮನ ಸೆಳೆಯುವ ಸೂಚನೆಯ ಸಂದರ್ಭದಲ್ಲಿ ಸಂಬಂಧಪಟ್ಟ ಸದಸ್ಯರು ಮಾತನಾಡುವಾಗ ಅವರ ಎದುರುಗಡೆ ಖಾಲಿ ಕುರ್ಚಿ ಇದ್ದರೆ ಅವರು ಹೇಗೆ ಗಮನ ಸೆಳೆಯುತ್ತಾರೆ? ಸರ್ಕಾರ ಎನ್ನುವುದು ಇದೆಯೇ? ಸರ್ಕಾರ ಅನ್ನುವುದು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ನಾವು ಯಾರ ಗಮನವನ್ನು ಸೆಳೆಯಬೇಕು? ಇದನ್ನು ವಿರೋಧಿಸಿ ನಾನು ಕೂಡ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಕೂಡ ಸಭಾತ್ಯಾಗ ಮಾಡಿದ್ದರು)

ಶ್ರೀ ಎಸ್.ಸುರೇಶ್ ಕುಮಾರ್: ನಮ್ಮ ಒಂದು ಆಗ್ರಹಕ್ಕೆ ನೀವು ತೇಲಿಸಿ ಉತ್ತರ ನೀಡುವುದನ್ನು ಕಲಿತಿದ್ದೀರಿ. ಹೀಗಾಗಿ ನಾವು ಅವರ ತರಹ ಸಭಾತ್ಯಾಗ ಮಾಡದೇ ಸಚಿವರು ಇಲ್ಲಿಗೆ ಬರುವ ತನಕ ನಾವು ಇಲ್ಲಿಯೇ ಧರಣಿ ಮಾಡುತ್ತೇವೆ.